ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ :— ಪೊಟ್ಟಿ ಹಕ್ಕುಪತ್ರ ಕೊಡಲು ಶಾಮೀಲಾದ ಅಧಿಕಾರಿಗಳಿಗೆ ಈ ಕ್ರಮ ತೆಗೆದುಕೊಂಡ ಅಧಿಕಾರಿಗಳ ಮೇಲೇನು ಕ್ರಮ ತೆಗೆದುಕೊಳ್ಳುತ್ತೀರಿ? ಹಕ್ಕುಪತ್ರ ಹೊಂದಿರುವವರಿಗೆ ನಿವೇಶನ ಕೊಡುತ್ತೀರಾ?

SRI QUMURUL ISLAM :— If you bring to my notice any specific case, I will enquire.

ಶ್ರೀ ಎ.ಆರ್. ಕೃಷ್ಣಮೂರ್ತಿ :— ಮಾನ್ಯ ಸಚಿವರು ಸರ್ಕಾರದ ಮಾನದಂಡದ ಪ್ರಕಾರ ಗುರಿ ನಿಗದಿಪಡಿಸಿದ್ದೇವೆಂದು ಹೇಳಿದ್ದಾರೆ. ನಾನು ನನ್ನ ಕ್ಷೇತ್ರದ ಉದಾಹರಣೆ ಕೊಡುವುದಾದರೆ, ಆಶ್ರಯ ಸಮಿತಿಯಲ್ಲಿ ಸರ್ಕಾರ ಈ ವರ್ಷ ನನ್ನ ಕ್ಷೇತ್ರಕ್ಕೆ ಕೇವಲ 98 ಸೈಟುಗಳನ್ನು ಖರೀದಿಸಲು ಅವಕಾಶ ಕೊಟ್ಟಿದ್ದು, ಹಿಂದೆ ನಮ್ಮ ಸರ್ಕಾರದಲ್ಲಿ ಸಾವಿರಾರು ಸೈಟುಗಳನ್ನು ಖರೀದಿಸಿ ಹಂಚಿಕೆ ಮಾಡಿರುವ ಉದಾಹರಣೆ ಇದೆ. ಆದುದರಿಂದ, ಇದರ ಬಗ್ಗೆ ಕ್ಲಾರಿಫೈ ಮಾಡಬೇಕು.

ಶ್ರೀ ಖಮರುಲ್ ಇಸ್ಲಾಂ :— ಸದಸ್ಯರು ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ, ನಾನು ಉತ್ತರಿಸುತ್ತೇನೆ.

ಬೀದರ್ ಜಿಲ್ಲೆಯಲ್ಲಿ ಅತಿ ವೃಷ್ಟಿಯಿಂದ ಹಾನಿಯಾಗಿರುವುದು.

492(4600) ಶ್ರೀ ದಿನೇಶ್ ಗುಂಡುರಾವ್ (ಗಾಂಧಿನಗರ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬೀದರ್ ಜಿಲ್ಲೆಯಲ್ಲಿ ಇತ್ತೀಚೆಗೆ ಬಂದ ಅತಿವೃಷ್ಟಿಯಿಂದಾದ ಹಾನಿಯ ಮೊತ್ತವೆಷ್ಟು;

2. ಇಲ್ಲಿನ ನಿರಾಶ್ರಿತರಿಗೆ ಹಾಗೂ ತೊಂದರೆಗೊಳಗಾದ ಜನರಿಗೆ ಪರಿಹಾರಕ್ಕಾಗಿ ಇದುವರೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಹಣವೆಷ್ಟು?

3. ಈ ಹಣದಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳಾವುವು (ವಿವರ ನೀಡುವುದು)

4. ಬಾಕಿ ಉಳಿದಿರುವ ಪರಿಹಾರ ಹಣವನ್ನು ಸರ್ಕಾರವು ಎಂದು ಬಿಡುಗಡೆ ಮಾಡುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :—

1. ಬೀದರ್ ಜಿಲ್ಲೆಯಲ್ಲಿ ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದ ಒಟ್ಟು ರೂ. 1745.15 ಲಕ್ಷಗಳಷ್ಟು ನಷ್ಟ ಉಂಟಾಗಿದೆ ಎಂದು ಅಂದಾಜು ಮಾಡಲಾಗಿದೆ.

2. ಈ ಸಾಲಿನಲ್ಲಿ ಪ್ರವಾಹ/ಭಾರಿ ಮಳೆಯಲ್ಲಿ ನೊಂದ ಸಂತ್ರಸ್ತರಿಗೆ ಪರಿಹಾರ ನೀಡಲು ಪ್ರವಾಹ ಪರಿಹಾರ ಕಾರ್ಯಗಳಿಗಾಗಿ ರೂ. 200.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

3. ಸರ್ಕಾರದಿಂದ ಬಿಡುಗಡೆ ಮಾಡಲಾಗಿರುವ ಮೊತ್ತ ಪೈಕಿ ರೂ. 140.00ಲಕ್ಷಗಳನ್ನು ರಸ್ತೆ, ಸೇತುವೆ ಮತ್ತು ಸಣ್ಣ ನೀರಾವರಿ ಕೆರೆಗಳ ದುರಸ್ತಿಗಾಗಿ ಮತ್ತು ರೂ. 50.00 ಲಕ್ಷಗಳನ್ನು ನೊಂದ ಸಂತ್ರಸ್ತರಿಗೆ ಪರಿಹಾರ ನೀಡಲು ಬಿಡುಗಡೆ ಮಾಡಲಾಗಿದೆ. ಉಳಿದ ಹತ್ತು ಲಕ್ಷಗಳನ್ನು ಪ್ರವಾಹ ಪರಿಹಾರ ಇನ್ನಿತರೇ ಬಾಬ್ತಿಗೆ ವಿನಿಯೋಗಿಸಲಾಗಿದೆ.

4. ಈವರೆಗೆ ಜಿಲ್ಲಾಧಿಕಾರಿಗಳಿಂದ ಬಂದಿರುವ ವರದಿಯನ್ವಾಧರಿಸಿ ಬೀದರ್ ಜಿಲ್ಲೆಗೆ ರೂ. 200.00 ಲಕ್ಷಗಳನ್ನು ಪ್ರವಾಹ ಪರಿಹಾರ ಕಾರ್ಯಗಳಿಗಾಗಿ ಬಿಡುಗಡೆ ಮಾಡಲಾಗಿದ್ದು, ಮುಂದೆ ಜಿಲ್ಲಾಧಿಕಾರಿಗಳಿಂದ ಬರಬಹುದಾದ ಬೇಡಿಕೆಗಳನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಪ್ರಕೃತಿ ವಿಕೋಪ ಪರಿಹಾರ ನಿಧಿಯ ನಿರ್ವಹಣಾ ಮತ್ತು ಆಡಳಿತ ಸಮಿತಿಯಲ್ಲಿ ಪರಿಶೀಲಿಸಿ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ದಿನೇಶ್ ಗುಂಡೂರಾವ್ :— ನಾನು ಕೇಳಿರುವ ಪ್ರಶ್ನೆಗೆ ಸಚಿವರು ಉತ್ತರಿಸಿದ್ದಾರೆ. ನನ್ನ ಉಪ ಪ್ರಶ್ನೆ ಏನೆಂದರೆ, ಬೀದರ್ ಗಡಿ ಭಾಗದಲ್ಲಿರುವ ಜಿಲ್ಲೆಯಾಗಿದ್ದು, ಅಲ್ಲಿನ ರೈತಾಪಿ, ದೀನ-ದಲಿತರಿಗೆ ಅತಿ ಶೀಘ್ರದಲ್ಲಿ ಹಣ ಬಿಡುಗಡೆಯಾಗಬೇಕಾಗಿದೆ. ಬಿಡುಗಡೆ ಮಾಡಿರುವ ಎರಡು ಕೋಟಿ ರೂಪಾಯಿಗಳು ಸಾಕಾಗುವುದಿಲ್ಲ. 17½ ಕೋಟಿ ರೂಪಾಯಿಗಳ ಅಂದಾಜಿದ್ದರೂ ಕೇವಲ ಎರಡು ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಆದುದರಿಂದ, ಸಂತ್ರಸ್ತರಿಗೆ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದ್ದೀರಿ. ಇನ್ನೂ ಎಷ್ಟು ಹಣವನ್ನು ಸಂತ್ರಸ್ತರಿಗೆ ತಾವು ನೀಡಬೇಕಾಗಿದೆ? ಅದನ್ನು ಆದಷ್ಟು ಬೇಗ ಕೊಡಿ. ಪರಿಹಾರ ಸಂತ್ರಸ್ತರಿಗೆ ತಲುಪಬೇಕಾದರೆ, ತುರ್ತಾಗಿ ಹಣ ಬಿಡುಗಡೆಯಾಗಬೇಕು. ಇಲ್ಲವಾದಲ್ಲಿ ಪ್ರಯೋಜನವಾಗುವುದಿಲ್ಲ. xxx

---

xxx ಈ ಪದಗಳನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :— ಬೀದರ್ ಜಿಲ್ಲೆಯಲ್ಲಿ ಬಿದ್ದ ಭಾರೀ ಮಳೆಯ ಪರಿಣಾಮವಾಗಿ 1745. 15 ಲಕ್ಷಗಳಷ್ಟು ಹಾನಿಯಾಗಿದೆ ಎಂದು ಅಂದಾಜು ಮಾಡಲಾಗಿದ್ದು, ಆ ಪೈಕಿ ಮನೆಗಳು ಕುಸಿದು ಹಾನಿಯಾಗಿರುವ ಹಾಗೂ ಜೀವ ಹಾನಿಯಾಗಿರುವ ಪ್ರಕರಣಗಳಲ್ಲಿ ಪರಿಹಾರ ನೀಡಿ, 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅತೀವೃಷ್ಟಿಯಲ್ಲಿ ಹಾನಿಯಾದ ರಸ್ತೆ, ಸೇತುವೆ, ಸಣ್ಣ ನೀರಾವರಿ ಕೆರೆಗಳ ದುರಸ್ಥಿತಿಗಾಗಿ 40 ಲಕ್ಷ ರೂಪಾಯಿಗಳನ್ನು, ಪ್ರವಾಹ ಪರಿಹಾರ, ಇತರೆ ಬಾಬುಗಳಿಗೆ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಸರ್ಕಾರದಿಂದ ಈವರೆಗೆ ಬಿಡುಗಡೆಯಾಗಿರುವ 200ಲಕ್ಷ ರೂಪಾಯಿಗಳ ಪೈಕಿ ರಸ್ತೆ, ಸೇತುವೆ ಹಾಗೂ ಸಣ್ಣ ನೀರಾವರಿ ಕೆರೆಗಳ ದುರಸ್ಥಿತಿಗಾಗಿ 122 ಲಕ್ಷ ರೂಪಾಯಿಗಳನ್ನು ಪರಿಗಣಿಸಿ, ಮಂಜೂರಾತಿ ನೀಡಿ, ಆದರ ತುರ್ತು ಅನುಷ್ಠಾನಕ್ಕೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಜೀವ ಹಾನಿ ಹಾಗೂ ಇತರೆ ಪರಿಹಾರ ಬಾಬುಗಳಿಗೆ 37.73ಲಕ್ಷ ರೂಪಾಯಿಗಳನ್ನು ವಿವಿಧ ತಹಶೀಲ್ದಾರವರಿಗೆ ಬಿಡುಗಡೆ ಮಾಡಲಾಗಿದೆ. ಪರಿಹಾರ ಕಾರ್ಯಗಳು ಮುಕ್ತಾಯ ಹಂತದಲ್ಲಿ ಜಿಲ್ಲಾಧಿಕಾರಿಗಳಿಂದ ಹೆಚ್ಚು ಬೇಡಿಕೆ ಬಂದಲ್ಲಿ, ಹೆಚ್ಚು ಅನುದಾನ ಕೊಡಲು ಸರ್ಕಾರ ಪ್ರಯತ್ನಿಸುತ್ತದೆ.

ಶ್ರೀ ಗುಂಡಪ್ಪ ವಕೀಲ್ :— 17 ಕೋಟಿ ರೂಪಾಯಿಗಳ ಹಾನಿಯಾಗಿದೆ ಎಂದು ಹೇಳಿರುವುದು ನಮ್ಮ ವರದಿಯಲ್ಲ. ಅದು ಸರ್ಕಾರದ ಕಂದಾಯ ಇಲಾಖಾ ವರದಿ. ಇದನ್ನು ಬೀದರ್ ಜಿಲ್ಲೆಯ ಜನರು ಹೇಳಿದರೆ, ಯಾರೂ ಕೇಳುತ್ತಿಲ್ಲ. xxx ಅದರ ಸಲುವಾಗಿ, ನಾವೆಲ್ಲ ದಿನೇಶ್ ಗುಂಡೂರಾಯರ ಹತ್ತಿರ ಹೋಗಿ, ಅವರ ಘನ ವ್ಯಕ್ತಿತ್ವದ ಪರಿಣಾಮ ಸರ್ಕಾರದ ಮೇಲಾಗುತ್ತದೆಂದು ನಂಬಿಕೊಂಡು, ಅವರನ್ನು ಭಿಕ್ಷೆ ಬೇಡಿ ಈ ಪ್ರಶ್ನೆ ಎತ್ತಿದ್ದೇವೆ.

ಅಧ್ಯಕ್ಷರು :— ದಿನೇಶ್ ಗುಂಡೂರಾಯರಿಗೆ ಪ್ರಶ್ನೆ ಕೇಳಲು ಎಷ್ಟು ಹಕ್ಕಿದೆಯೋ, ಅಷ್ಟೇ ಹಕ್ಕು ತಮಗೂ ಇದೆ.

ಶ್ರೀ ಗುಂಡಪ್ಪ ವಕೀಲ್ :— ಆದರೆ, ಅವರು ಕೇಳುತ್ತಿಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :— ಮಾನ್ಯ ದಿನೇಶ್ ಗುಂಡುರಾಯರವರನ್ನು ಮಾನ್ಯ ಗುಂಡಪ್ಪ ವಕೀಲರವರು ಕೇಳಿಲ್ಲ. ನಾನು ಅವರನ್ನು ಏನು ಸ್ವಾಮಿ ನೀವು ಪ್ರಶ್ನೆ ಹಾಕಿದ್ದೀರಲ್ಲಾ ಎಂದು ಕೇಳಿದೆ, ಅದಕ್ಕವರು ಯೂತ್ ಕಾಂಗ್ರೆಸ್‌ನವರು ಬಂದು ಈ ಪ್ರಶ್ನೆ ಕೇಳಿ ಎಂದು ಒತ್ತಾಯ ಮಾಡಿದ್ದರು ಎಂದರು. ಅವರು ಈ ಜಿಲ್ಲೆಯ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಿನ್ನೆ ದಿವಸ ನಾನು ಅವರಿಗೆ, ಅಧಿವೇಶನ ಮುಗಿದ ಮೇಲೆ ಬೀದರ್‌ಗೆ ಬಂದು ಸ್ವತಃ ಪರಿಶೀಲಿಸಿ ಅಲ್ಲಿ ಏನು ತೊಂದರೆ ಇದೆ ಅದನ್ನು ಪರಿಹರಿಸುತ್ತೇನೆಂದು ಹೇಳಿದರೂ ಅವರಿಗೆ ಸಮಾಧಾನವಾಗಿಲ್ಲ.

---

xxx ಈ ಪದಗಳನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎ. ರಾಮದಾಸ್ :— ಬೀದರ್ ಜಿಲ್ಲೆಯನ್ನು ನಿಮ್ಮ ಸರ್ಕಾರ ಎಷ್ಟು ನಿರ್ಲಕ್ಷ್ಯ ಮಾಡಿತ್ತಿದೆ ಎಂಬುದು ಇದರಿಂದ ಗೊತ್ತಾಗುತ್ತದೆ.

ಶ್ರೀ ದಿನೇಶ್ ಗುಂಡುರಾವ್ :— ನನ್ನ ಪ್ರಶ್ನೆ ಏನೆಂದರೆ, ನೊಂದ ಸಂತ್ರಸ್ತರಿಗೆ ಈಗಾಗಲೇ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇವರಿಗೆ ಇನ್ನು ಎಷ್ಟು ದುಡ್ಡು ಬಿಡುಗಡೆ ಮಾಡಬೇಕು ಎನ್ನುವ ಪಟ್ಟಿ ನಿಮ್ಮ ಹತ್ತಿರ ಇದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :— ಜಿಲ್ಲಾಧಿಕಾರಿಗಳಿಂದ 1-4-2000 ದಿಂದ 6-11-2000ದ ವರೆಗೆ ಈಗಾಗಲೇ 310 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಈಗಾಗಲೇ ಹಣ ಖರ್ಚಾಗುತ್ತಿದೆ. ಇನ್ನೂ ಹೆಚ್ಚಿನ ಬೇಡಿಕೆ ಬಂದರೆ ಸರ್ಕಾರ ಕೊಡುವ ಕೆಲಸ ಏಂಡಿತವಾಗಿ ಮಾಡುತ್ತದೆ ಎನ್ನುವ ಮಾತನ್ನು ಹೇಳಿದ್ದೇನೆ.

ಶ್ರೀ ಗುಂಡಪ್ಪ ವಕೀಲ :— ಇದು ತುಂಬಾ ಗಂಭೀರವಾದ ವಿಷಯ. 17 ಕೋಟಿ ರೂಪಾಯಿಗಳಲ್ಲಿ, ಇವರು ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೀರಿ ಎನ್ನುವುದನ್ನು ಕೂಡ ಹೇಳಬೇಕು. ಇದರ ಜೊತೆಗೆ ಮಾನ್ಯ ಸದಸ್ಯರಾದ ವೈ.ಕೆ. ರಾಮಯ್ಯನವರು ಹಾಗೂ ಬಿ.ಎಸ್. ಪಾಟೀಲ್ ಸಾಸನೂರುರವರು ನಮ್ಮ ಭಾಗದಲ್ಲಿ ಸುತ್ತಿ ಬಂದಿರುತ್ತಾರೆ. ಇವರಿಗೆ ನಮ್ಮ ಕಷ್ಟ ಗೊತ್ತಿರುವುದರಿಂದ ಇವರುಗಳು ನಮ್ಮ ಸಹಾಯಕ್ಕೆ ಬಂದ ಈ ಸರ್ಕಾರದಿಂದ ಏನಾದರೂ ಅನುದಾನ ಕೊಡಿಸಿಕೊಡಬೇಕೆಂದು ತಮ್ಮಲ್ಲಿ, ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ರಾಜೇಂದ್ರ ವರ್ಮ :— ಮಾನ್ಯ ಅಧ್ಯಕ್ಷರೆ, xxx ನಾವು ಕೂಡ ಇದರ ಬಗ್ಗೆ ಸಾಕಷ್ಟು ಚರ್ಚಿಸಿ, ನಿಮ್ಮ ಎದುರಿನಲ್ಲಿಯೇ ಇದನ್ನು ಕೇಳಿದ್ದೇವೆ. ಕೊನೆಗೆ ನಾವು ಕೇಳಿ ಕೇಳಿ ಸಾಕಾಗಿ ಸೋತು ಸುಮ್ಮನೆ ಕುಳಿತೆವು. ನಮ್ಮ ಧರ್ಮದ ಪ್ರಕಾರನಾವು ಕೇಳುತ್ತಲೇ ಇದ್ದೇವೆ ಆದರೂ ಏನಾದರೂ ಆಗುತ್ತದೆ ಎನ್ನುವ ದೃಷ್ಟಿಯಿಂದ ಅವರು ಕೇಳಿದ್ದಾರೆ. ಈಗಾಗಲೇ ಜಿಲ್ಲಾಧಿಕಾರಿಗಳು ಸುಮಾ 17 ಕೋಟಿ ರೂಪಾಯಿ ನಷ್ಟವಾಗಿದೆ ಎನ್ನುವ ವರದಿ ನಿಮ್ಮ ಕೈಯಲ್ಲಿ ಕೊಟ್ಟಿರುವಾಗ ಪುನಃ ಜಿಲ್ಲಾಧಿಕಾರಿಗಳಿಂದ ಎಷ್ಟು ಹಣ ಬಿಡುಗಡೆ ಮಾಡಬೇಕೆನ್ನುವ ವರದಿ ಏಕೆ ಬರಬೇಕು? ಈಗ ನೀವು ಬಿಡುಗಡೆಗೊಳಿಸಿರುವ ಮೂರು ಕೋಟಿ ರೂಪಾಯಿ ಸಾಲುವುದಿಲ್ಲ. ನಿಮ್ಮ ಭಾಗದ ಕಡೆಯಾದರೆ ದುಡ್ಡು ಬಹಳ ಬೇಗ ಮಂಜೂರು ಮಾಡಿಸಿಕೊಳ್ಳುತ್ತೀರಿ, ಆದರೆ ಅದೇ ನಮ್ಮ ಬೀದರ್‌ಗೆ ಆದರೆ ಮಾಡುವುದಿಲ್ಲ. ಇವತ್ತು ಅಲ್ಲಿನ ರೈತರು, ಬಡವರು, ಮನೆಯಲ್ಲಿ ಇರಲಾರದೆ ಬೇರೆ ಬೇರೆ ಕಡೆ ಹೋಗಿ ಜೀವನ ಮಾಡುತ್ತಿದ್ದಾರೆ. ಇದಕ್ಕಾಗಿ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಸಚಿವರು ಹಿರಿಯ ಹಾಗೂ ಅನುಭವಿ ರಾಜಕಾರಣಿಗಳು,

---

xxx ಈ ಪದಗಳನ್ನು ಅಧ್ಯಕ್ಷರ ಆಪ್ಷಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಬಡವರ, ರೈತರ, ಕಷ್ಟನುಷ್ಟಗಳನ್ನು ಅರಿತಿರುವುದರಿಂದ ದಯಮಾಡಿ ಡಿ.ಸಿ.ಯವರಿಂದ ವರದಿ ಬರುವುದಕ್ಕಿಂತ ಮುಂಚೆ ಉಳಿದ ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಬೀದರ್ ಜಿಲ್ಲೆಗೆ ಪ್ರವಾಸ ಕೈಗೊಂಡಿದ್ದೆ, ಅಲ್ಲಿ ಡಿ.ಸಿ.ಯವರ ವರದಿ ಪ್ರಕಾರ ನಷ್ಟದ ಪ್ರಮಾಣದ 17 ಕೋಟಿ ರೂಪಾಯಿ ಆದರೆ, ನಾವು ಕಣ್ಣಾರೆ ನೋಡಿದ ನಷ್ಟದ ಪ್ರಮಾಣ ಸುಮಾರು 25 ಕೋಟಿ ರೂಪಾಯಿ ಬೀದರ್ ಹತ್ತಿರವಿರುವ ಒಂದು ದೊಡ್ಡ ಕೆರೆ ಒಡೆದು ಹೋಗಿದೆ ಅದೂ ಇನ್ನೂ ರಿಪೇರಿಯಾಗಿಲ್ಲ. ನಾನು ಇದರ ಬಗ್ಗೆ ಮೊನ್ನೆ ದೂರವಾಣಿಯ ಮುಖಾಂತರ ವಿಚಾರಿಸಿದ್ದೆ. ಇದಕ್ಕಾಗಿ ಕೆಲವು ಅಂದಾಜು ತಯಾರಿಸಿದ್ದಾರೆ, ಅದಕ್ಕಾಗಿ ತಕ್ಷಣ ಇಲ್ಲಿ ಕ್ರಮವನ್ನು ತೆಗೆದುಕೊಳ್ಳುವುದರ ಜೊತೆಗೆ ಹೆಚ್ಚಿನ ಹಣ ಬಿಡುಗಡೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ದಿನೇಶ್ ಗುಂಡುರಾವ್‌ರವರು ಪ್ರಶ್ನೆ ಕೇಳುವಾಗ xxx ದಯಮಾಡಿ ಇದು ಕಡತಕ್ಕೆ ಹೋಗಬಾರದು ಏಕೆಂದರೆ ಆ ಮಾತು ಸದಭಿರುಚಿಯಿಂದ ಕೂಡಿಲ್ಲ.

ಅಧ್ಯಕ್ಷರು :— ಆಯಿತು ತೆಗೆಸೋಣ. ಅದನ್ನು ತೆಗಿಸಿ ಬಿಡಿ. ಮಾನ್ಯ ಸದಸ್ಯರು ಹೇಳಿದ್ದರೆ ಅದನ್ನು ತೆಗೆದು ಹಾಕಿ.

ಶ್ರೀ ದಿನೇಶ್ ಗುಂಡುರಾವ್ :— ನಾನು ಆ ರೀತಿ ಹೇಳಲಿಲ್ಲ.

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ :— ನಾನು ದಿನೇಶ್ ಗುಂಡುರಾವ್‌ರವರನ್ನು ಕೇಳಿದ್ದು ಬೀದರ್ ಬಗ್ಗೆ. ಇದರ ಬಗ್ಗೆ ಮಾನ್ಯ ಗುಂಡಪ್ಪ ವಕೀಲರೇ ಒಪ್ಪಿದರು. ಆದರೆ ನಮಗೆ ಇದರ ಬಗ್ಗೆ ಸರಿಯಾದ ಪರಿಹಾರ ಕೊಡುವುದಿಲ್ಲ ಅವರ ಮುಖಾಂತರ ನಾವು ಬೇಡಿಕೆ ಸಲ್ಲಿಸಿದೆವು. ಎಂದು ಅವರೇ ಈಗ ಹೇಳಿದರು.

ಶ್ರೀ ರಾಜೇಂದ್ರ ವರ್ಮ :— ಅದು ತಪ್ಪಾಗಿದ್ದರೆ ಅದನ್ನು ತೆಗೆದುಹಾಕಿ ಇದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಮಾತನಾಡಿದ್ದಾರೆ. ನಾವು ಕೂಡ ಈ ಬಗ್ಗೆ ಕೇಳಿದ್ದೇವೆ.

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ :— ನಾವು ಯಾರ ಹೆಸರನ್ನು ಹೇಳಲಿಲ್ಲ.

---

xxx ಈ ಪದಗಳನ್ನು ಅಧ್ಯಕ್ಷರ ಆಜ್ಞೆಯ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ರಾಜೇಂದ್ರ ವರ್ಮಾ :— ನಿಮಗೆ ಅಷ್ಟು ಅಭಿಮಾನವಿದ್ದರೆ ದುಡ್ಡನ್ನು ಬಿಡುಗಡೆ ಮಾಡುತ್ತಿದ್ದಿರಿ, ಇನ್ನು ಏಕೆ ಬಿಡುಗಡೆ ಮಾಡಿಲ್ಲ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ :— ನನಗೆ ಅಭಿಮಾನವಿದೆಯೆಂದು ನಾನು ಹೇಳಲಿಲ್ಲ. ಇದರಲ್ಲಿ ರಾಜಕೀಯವಿಲ್ಲ. ಮಾನ್ಯ ಅಧ್ಯಕ್ಷರೆ, ನಾನೀಗಾಗಲೇ ಹೇಳಿದಂತೆ, ಅವರೆನ್ನೆಲ್ಲ ಹಾಗೂ ಅವರ ಜೊತೆಯಲ್ಲಿ ಜಿಲ್ಲಾಧಿಕಾರಿಗಳನ್ನು ಕರೆದು ಸ್ವತಃ ಪರಿಶೀಲಿಸಿ ಹಣಕೊಡುವುದರ ಬಗ್ಗೆ ಸರ್ಕಾರ ಪರ್ಯಾಲೋಚನೆ ಮಾಡುತ್ತಿದೆ ಎಂದು ನಿನ್ನೇ ದಿವಸ ಅವರಿಗೆ ಹೇಳಿದೆ. ಇದರಲ್ಲಿ ಯಾವ ರಾಜಕೀಯವೂ ಇಲ್ಲ, ಯಾರ ಹಸ್ತಕ್ಷೇಪವೂ ಇಲ್ಲ. ಮನೆ ಬಿದ್ದರೆ ಯಾವ ಪಾರ್ಟಿಯಾದರೂ ಏನು?

ರಾಜ್ಯದಲ್ಲಿ ತೆಂಗಿನಕಾಯಿ ಬೆಲೆ ಕುಸಿತ.

493(4197) ಶ್ರೀ ಜಯಪ್ರಕಾಶ್ ಹೆಗಡೆ ಕೆ. (ಬ್ರಹ್ಮಾವರ) :— ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ತೆಂಗಿನಕಾಯಿ ಬೆಲೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ತೆಂಗಿನಕಾಯಿಯನ್ನು ಖರೀದಿಸುವ ಇಚ್ಛೆ ಸರ್ಕಾರಕ್ಕೆ ಇದೆಯೇ?

ಇ) ಕೊಬ್ಬರಿಗೆ ಬೆಂಬಲ ಬೆಲೆ ನಿಗಧಿಪಡಿಸುವ ಇಚ್ಛೆ ಸರ್ಕಾರಕ್ಕಿದೆಯೇ?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :—

ಅ) ಬಂದಿದೆ.

ಆ) ಇಲ್ಲ

ಇ) ಒಣ ಕೊಬ್ಬರಿಗೆ ಬೆಂಬಲ ಬೆಲೆಯನ್ನು ಈಗಾಗಲೇ ನಿಗದಪಡಿಸಲಾಗಿದೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ :— ಮಾನ್ಯ ಅಧ್ಯಕ್ಷರೆ, ಇವರು ಉತ್ತರವನ್ನು ಓದಿಸಿದ್ದಾರೆ. ಪ್ರಾಯಶಃ ಕಳೆದ 10 ದಿನಗಳಿಂದ ಬೆಲೆ ಕುಸಿತದ ಬಗ್ಗೆ ಇಲ್ಲಿ ಚರ್ಚೆಯಾಯಿತು ಇದು ಅರ್ಥಹೀನವಾಗಿದೆ ಎಂದು ನನ್ನ ಅಭಿಪ್ರಾಯ. ಏಕೆಂದರೆ, ನನ್ನ (ಅ) ಪ್ರಶ್ನೆಗೆ "ಬಂದಿದೆ" ಎಂದು (ಆ) ಪ್ರಶ್ನೆಗೆ ಇಲ್ಲ ಎನ್ನುವ ಉತ್ತರ ನೀಡಿದ್ದಾರೆ. ಆದರೆ ಇಷ್ಟು ದಿನ ಚರ್ಚೆಯಾದ ಮೇಲೆ ಇವರೇನು ತೀರ್ಮಾನ ತೆಗೆದುಕೊಂಡಿದ್ದಾರೆಂಬುದು ಬೇಕಾಗಿತ್ತು. ಈಗಾಗಲೇ ಹೇರಳದಲ್ಲಿ ಅಲ್ಲಿನ ಮುಖ್ಯಮಂತ್ರಿಯವರು, ತೆಂಗಿನಕಾಯಿಯ ಸೈಜಿನ ಮೇಲೆ